SC No. 86/2025
PW-2

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

ಎಸ್. ಸಿ. 86/2025

| | | |
|---|---|---|
| ಸಾಕ್ಷಿದಾರರ ಹೆಸರು | ಸುಶೀಲ | ಪ್ರಮಾಣ ವಚನ ಮಾಡಿದ ದಿನಾಂಕ: 01.04.2026 |
| ತಂದೆಯ/ಗಂಡನ ಹೆಸರು | ಮಲ್ಲೇಶ | |
| ವಯಸ್ಸು | 45 ವರ್ಷ | |
| ವೃತ್ತಿ | ವ್ಯವಸಾಯ | ಪ್ರಾ.ಸಾಃ 02 |
| ವಾಸ ಸ್ಥಳ | ಮಲಾರ ಕಾಲೋನಿ | ಚಾ.ಸಾಃ 08 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನನಗೆ ಪ್ರಾಸಾ-1 ಮತ್ತು ಚಾಸಾ-13 ಹಾಗೂ ಮೃತ ನಾಗರಾಜು ಗೊತ್ತು. ಮೃತ ನಾಗರಾಜು ನನಗೆ ಬಾವ ಇದ್ದರು. ಅವರು ನನ್ನ ಗಂಡನ ಅಣ್ಣ ಇದ್ದರು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಗೊತ್ತು. ಮೃತ ನಾಗರಾಜು ಹೇಗೆ ಮರಣ ಹೊಂದಿದರು ಎಂದು ನನಗೆ ಗೊತ್ತಿರುವುದಿಲ್ಲ. ಸುಚಿತ್ರ ಮತ್ತು 1 ನೇ ಆರೋಪಿತನ ಮಗನ ನಡುವೆ ಪ್ರೀತಿ ಪ್ರೇಮ ಆಗಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅದೇ ವಿಚಾರದಲ್ಲಿ ನನ್ನ ಬಾವನಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರಾಸಾ-1 ರವರು ಆರೋಪಿತರ ವಿರುದ್ದವಾಗಿ ದೂರನ್ನು ಕೊಟ್ಟ ಬಗ್ಗೆ ನನಗೆ ಗೊತ್ತಿರುವುದಿಲ್ಲ ಪೊಲೀಸರಿಗೆ ನಾನು ಯಾವುದೇ ಸ್ಥಳ ವನ್ನು ತೋರಿಸಿರುವುದಿಲ್ಲ

ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಸ್ಥಳ ಪಂಚನಾಮೆ ಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸ್ಥಳ ಪಂಚನಾಮೆಯನ್ನು ನಿಪಿ-9 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನಿಪಿ-9 ರಲ್ಲಿ ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ನಾನು ಜಮೀನಿನ ಕಡೆ ಹೊರಟಿದ್ದೆ ನನಗೆ ಸಹಿ ಮಾಡು ಎಂದು ಹೇಳಿದ್ದರು ಸಹಿ ಮಾಡಿದ್ದೆ. ನಾನು ಈಗ ನೋಡುತ್ತಿರುವ ಪ್ಲಾಸ್ಟಿಕ್ ಹಳೆಯ ಹಗ್ಗ, ಕುಯ್ದು ತುಂಡು ಮಾಡಿದ ಪ್ಲಾಸ್ಟಿಕ್ ಹಗ್ಗ, ಕುಡುಗೋಲು ಮತ್ತು ಪ್ಲಾಸ್ಟಿಕ್ ಚೇರ್ ಈ ಹಿಂದೆ ನೋಡಿರುವುದಿಲ್ಲ. ಪ್ರಕರಣದ ಇತ್ಯರ್ಥದ ಸಲುವಾಗಿ ಒಂದು ಪ್ಲಾಸ್ಟಿಕ್ ದಾರದ ಬಿಳಿಯ ಬಣ್ಣದ ಹಳೆಯ ಹಗ್ಗವನ್ನು ಎಂ.ಒ-1 ಎಂದು, ಕುಡುಗೋಲಿನಿಂದ ಕುಯ್ದು ತುಂಡು ಮಾಡಿದ ಪ್ಲಾಸ್ಟಿಕ್ ಹಗ್ಗದ 2 ತುಂಡುಗಳನ್ನು ಒಟ್ಟಾಗಿ ಎಂ.ಒ-2 ಎಂದು, ಕಬ್ಬಿಣದ ಕುಡುಗೋಲನ್ನು ಎಂ.ಒ-3 ಎಂದು ಮತ್ತು ಪ್ಲಾಸ್ಟಿಕ್ ಚೇರ್ ಅನ್ನು ಎಂ.ಒ-4 ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ 2 ಫೋಟೋಗಳಲ್ಲಿ ನಾನು ಇರುತ್ತೇನೆ. ಆ ಫೋಟೋಗಳನ್ನು ಯಾವಾಗ ಮತ್ತು ಯಾವ ಕಾರಣಕ್ಕಾಗಿ ತೆಗೆದುಕೊಂಡಿದ್ದರು ಎಂದು ಗೊತ್ತಿರುವುದಿಲ್ಲ ಸಾಕ್ಷಿದಾರರು ನೋಡಿ ಗುರುತಿಸಿದ ಫೋಟೋಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಈ ಪ್ರಕರಣದ ಸಂಬಂಧ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ನಾನು ಈಗ

ನೋಡುತ್ತಿರುವ ನಿಪಿ-2 ಅನ್ನು ಈ ಹಿಂದೆ ನೋಡಿರುವುದಿಲ್ಲ. ಮತ್ತು ಅದರಲ್ಲಿ ಯಾರು ಏನು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನನ್ನ ಬಾವನ ಮಗಳು ಸುಚಿತ್ರ ದ್ವಿತೀಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿ ಆನಂತರ ಮನೆಯಲ್ಲಿಯೇ ಇದ್ದಳು ಎಂದರೆ ನನಗೆ ಗೊತ್ತಿರುವುದಿಲ್ಲ. ಈಗ್ಗೆ ಸುಮಾರು 2 ವರ್ಷಗಳ ಹಿಂದೆ ನನ್ನ ಬಾವನ ಮಗಳು ಸುಚಿತ್ರ 1 ನೇ ಆರೋಪಿ ಮಗ ಚಂದು ಎಂಬುವರನ್ನು ಪ್ರೀತಿ ಮಾಡುತ್ತಿದ್ದು ಮನೆ ಬಿಟ್ಟು ಹೋಗಿದ್ದು ನನ್ನ ಬಾವ ಹುಡುಕಿ ಚಂದು ಎಂಬುವನಿಗೆ ತಿಳುವಳಿಕೆ ಹೇಳಿ ಸುಚಿತ್ರಳಿಗೆ ಆತನ ಸಹವಾಸಕ್ಕೆ ಹೋಗಬೇಡ ಎಂದು ಬುದ್ದಿ ಹೇಳಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಇದೇ ವಿಚಾರವಾಗಿ ಆರೋಪಿತರಿಗೂ ನನ್ನ ಬಾವನಿಗೂ ಗಲಾಟೆ ವಿಚಾರದಲ್ಲಿ ಪಂಚಾಯಿತಿ ಆಗಿದ್ದು ಇಬ್ಬರನ್ನು ಕರೆಸಿ ಬುದ್ದಿವಾದ ಹೇಳಿದ್ದರು ಎಂದರೆ ಸರಿಯಲ್ಲ. ದಿನಾಂಕ 11.11.2021 ರಂದು ರಾತ್ರಿ 8.00 ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಇದ್ದಾಗ ನನ್ನ ಬಾವನವರ ಮನೆ ಮುಂದೆ ಕೂಗಾಡುವ ಸದ್ದು ಕೇಳಿಸಿದ್ದು ಹೋಗಿ ನೋಡಲಾಗಿ ಆರೋಪಿತರೆಲ್ಲರೂ ಗುಂಪು ಕಟ್ಟಿಕೊಂಡು ಬಂದು

ನನ್ನ ಬಾವನಿಗೆ ಅವಾಚ್ಯ ಶಬ್ದಗಳಿಂದ ಬೈದು ಮಗಳನ್ನು ಮದುವೆ ಮಾಡಿದರೆ ಹಣ ಖರ್ಚು ಆಗುತ್ತದೆ ಎಂದು ತಿಳಿದು ಚಂದುವಿನ ಜೊತೆ ಓಡಿ ಹೋಗಲಿ ಅಂತ ಮದುವೆ ಮಾಡುತ್ತಿರುವುದಿಲ್ಲ ಎಲ್ಲಿಯಾದರೂ ಹೋಗಿ ಸಾಯಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಪ್ರಚೋದನೆ ಮಾಡಿದ್ದರು ಎಂದರೆ ಸರಿಯಲ್ಲ. ದಿನಾಂಕ 16.11.2021 ರಂದು 8.00 ಗಂಟೆ ಸಮಯದಲ್ಲಿ ಆರೋಪಿತರೆಲ್ಲರೂ ಪುನಃ ನನ್ನ ಭಾವನ ಮನೆ ಹತ್ತಿರ ಬಂದು ಅವಾಚ್ಯ ಶಬ್ದಗಳಿಂದ ಬೈದು ನನ್ನ ಭಾವನಿಗೆ ನೀನು ಬಾಳುವುದಕ್ಕಿಂತ ಎಲ್ಲಿಯಾದರೂ ಹೋಗಿ ಸಾಯಿ ಎಂದು ಪ್ರಚೋದನೆ ಮಾಡಿದ್ದರು ಎಂದರೆ ಸರಿಯಲ್ಲ. ದಿನಾಂಕ 16.11.2021 ರಂದು ರಾತ್ರಿ 9.45 ಗಂಟೆ ಸಮಯದಲ್ಲಿ ನಾನು ಮನೆಯ ಹತ್ತಿರ ಇದ್ದಾಗ ನನ್ನ ಬಾವನ ಮನೆಯ ಹತ್ತಿರ ಜೋರಾಗಿ ಅಳುವ ಸದ್ದು ಕೇಳಿಸಿ ನಾನು ಹೋಗಿ ನೋಡಲಾಗಿ ನನ್ನ ಬಾವ ಚೇರ್ ಮೇಲೆ ನಿಂತುಕೊಂಡು ಪ್ಲಾಸ್ಟಿಕ್ ಹಗ್ಗದಿಂದ ವರಾಂಡದ ಮರದ ತೇರಿಗೆ ನೇಣು ಹಾಕಿಕೊಂಡು ನೇತಾಡುತ್ತಿದ್ದು ನಾನು ಮತ್ತು ರಾಚಯ್ಯ ಸೇರಿ ಕುಡುಗೋಲಿನಿಂದ ಪ್ಲಾಸ್ಟಿಕ್ ದಾರವನ್ನು ಕಟ್ ಮಾಡಿ ಕೆಳಗೆ ಇಳಿಸಿದ್ದು ಜೀವ ಇರಬಹುದು ಎಂದು ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಗೆ ಸೇರಿಸಿದಾಗ ವೈದ್ಯರು ಪರೀಕ್ಷಿಸಿ ಮೃತ ಪಟ್ಟಿರುತ್ತಾರೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ನಾನು ನನ್ನ ಬಾವನ ಮೈಮೇಲೆ ಇದ್ದ ಬಟ್ಟೆಯನ್ನು ಸರಿಪಡಿಸುವಾಗ ಜೇಬಿನಲ್ಲಿ ಒಂದು ಚೀಟಿ ಇದ್ದು ಅದನ್ನು ನಾನು ಸುಚಿತ್ರಳ ಕೈಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸುಚಿತ್ರ ಚೀಟಿಯನ್ನು ಓದಿ ನನಗೆ ಮತ್ತು ಪ್ರಾಸಾ-1 ರವರಿಗೆ ತಿಳಿಸಿದ್ದು ಆ ಚೀಟಿಯಲ್ಲಿ ನನ್ನ ಸಾವಿಗೆ ಚಕ್ಕೂರು ಗ್ರಾಮದ ಸ್ಕೂಲ್ ಮಾಸ್ಟರ್

ಕೆಂಪರಾಜು, ಮಲಾರ ಕಾಲೋನಿಯ ಸ್ವಾಮಿ, ಕಂಡಕ್ಟರ್ ಕೆಂಪಯ್ಯ , ಅಭಿ, ಸುಂದ್ರಮ್ಮ ಅವರ ಸಂಬಂಧಿಕರು ಕಾರಣ ಇರುತ್ತಾರೆ ಎಂದು ಬರೆದು ಸಹಿ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಈಗ ಓದಿ ಹೇಳಿದ ನಿಪಿ-12 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದು ಸುಚಿತ್ರ ಮತ್ತು 1 ನೇ ಆರೋಪಿತನ ಮಗ ಚಂದು ಈಗ ಅನ್ಯೋನ್ಯವಾಗಿ ಇದ್ದು ಆರೋಪಿತರಿಗೆ ತೊಂದರೆ ಆಗಬಾರದು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸಿನವರಿಗೆ ನಾನು ನನ್ನ ಬಾವ ನೇಣು ಹಾಕಿಕೊಂಡಿದ್ದ ಸ್ಥಳ ವನ್ನು ತೋರಿಸಿದ್ದು ಆ ಸ್ಥಳದಲ್ಲಿ ಪೊಲೀಸರು ನಿಪಿ-9 ರ ಪ್ರಕಾರ ಎಂ.ಒ-1 ರಿಂದ 4 ಅನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ ಮತ್ತು ನಾನು ಈಗ ನೋಡುತ್ತಿರುವ ನಿಪಿ-2 ನನ್ನ ಬಾವ ಬರೆದಿರುವ ಡೆತ್ ನೋಟು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**